# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 51(65)
ಮಾನ್ಯ ಸದಸ್ಯರ ಹೆಸರು: ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ: 15.07.2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 10, 20 ಮತ್ತು 30 ಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ದಾಖಲಾತಿ ಹೊಂದಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು). | ರಾಜ್ಯದಲ್ಲಿ 10, 20 ಮತ್ತು 30 ಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ದಾಖಲಾತಿ ಹೊಂದಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಸರ್ಕಾರದ ಬಹುತೇಕ ಶಾಲೆಗಳಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕುಸಿತವಾಗುತ್ತಿರುವುದಕ್ಕೆ ಕಾರಣಗಳೇನು; ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | **ದಾಖಲಾತಿ ಕುಸಿತಕ್ಕೆ ಕಾರಣಗಳು:**<br>1. ಪೋಷಕರು ಆರ್ಥಿಕ ಸಂಕಷ್ಟದಿಂದಾಗಿ ವಲಸೆ ಹೋಗುವುದು.<br>2. ವೈಯಕ್ತಿಕ ಸಮಸ್ಯೆಯಿಂದಾಗಿ ಆಗಿಂದಾಗ್ಗೆ ಶಾಲೆಗೆ ಮಕ್ಕಳು ಗೈರು ಹಾಜರಾಗುವುದು.<br>3. ಇತರೆ ವೈಯಕ್ತಿಕ ಕಾರಣಗಳು.<br><br>ಈ ಮೇಲ್ಕಂಡ ಅಂಶಗಳು ದಾಖಲಾತಿ ಕುಸಿತಕ್ಕೆ ಕಾರಣವಾಗಿದ್ದು, ಈ ಅಂಶಗಳ ಸುಧಾರಣೆಗಾಗಿ ಈ ಕೆಳಕಂಡಂತೆ ದಾಖಲಾತಿ ಹೆಚ್ಚಳಕ್ಕೆ ಕ್ರಮವಹಿಸಲಾಗಿರುತ್ತದೆ.<br><br>**ದಾಖಲಾತಿ ಹೆಚ್ಚಳಕ್ಕೆ. ಸರ್ಕಾರದ ಕ್ರಮಗಳು:-**<br>1. ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಮಧ್ಯಾಹ್ನದ ಉಪಹಾರ, ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.<br>2. ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.<br>3. ಗುಣಾತ್ಮಕ ಶಿಕ್ಷಣಕ್ಕಾಗಿ ನಿಯಮಿತವಾಗಿ ಶಿಕ್ಷಕರಿಗೆ ತರಬೇತಿ ಆಯೋಜಿಸಲಾಗುತ್ತದೆ.<br>4. ಸರ್ಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.<br>5. 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳನ್ನು (ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ.<br>6. ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ನ್ಯೂನ್ಯತೆಗನುಗುಣವಾಗಿ |

| | | |
|---|---|---|
| | | ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.<br>7. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ ಯೋಗ, ಕರಾಟೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>8. ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಸಂಬಂಧಿಸಿದ ಪೋಷಕರು ಮತ್ತು ವಿದ್ಯಾರ್ಥಿಗಳನ್ನು ಮನವೊಲಿಸಿ, ಪುನ: ಶಾಲೆಗೆ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್.ಡಿ.ಎಂ.ಸಿ, ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.<br>9. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡುಹಿಡಿಯಲಾಗುತ್ತಿದೆ.<br>10.ಶಾಲಾ ದತ್ತು ಯೋಜನೆ (ಸಿ.ಎಸ್.ಆರ್) ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲಾಗುತ್ತಿದೆ.<br>11.6 ರಿಂದ 8ನೇ ತರಗತಿಗಳಿಗೆ ಬೋಧಿಸಲು 12429 ಜಿ.ಪಿ.ಟಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಮೂಲಕ ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಮವಹಿಸಲಾಗಿದೆ.<br>12.2021-22 & 2022-23 ರಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಶಿಕ್ಷಕರಿಗೆ ಕೋವಿಡ್ ಸಮಯದಲ್ಲಿ ತರಬೇತಿ ನೀಡಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಒತ್ತು ನೀಡಲಾಗಿದೆ.<br>13.2024-25ನೇ ಸಾಲಿನಲ್ಲಿ ರಾಜ್ಯಾದ್ಯಂತ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆದುರಾಗಿ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲೆಗಳಿಗೆ 33863 ಅತಿಥಿ ಶಿಕ್ಷಕರನ್ನು ಮತ್ತು ಪ್ರೌಢಶಾಲೆಗಳಿಗೆ 8954 ಅತಿಥಿ ಶಿಕ್ಷರನ್ನು ನೇಮಿಸಿಕೊಂಡು ಮಕ್ಕಳ ಬೋಧನೆಗೆ ತೊಂದರೆಯಾಗದಂತೆ ಮಕ್ಕಳ ಕಲಿಕೆಗೆ ಪ್ರೋತ್ಸಾಹಿಸಲಾಗಿರುತ್ತದೆ.<br>14.ಪ್ರಸ್ತುತ 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರಸ್ತುತ ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ |
| | | ಶಾಲೆಗಳ ಪೈಕಿ 55 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿರುತ್ತದೆ ಹಾಗೂ 1 ರಿಂದ 7ನೇ ತರಗತಿ ನಡೆಯುತ್ತಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಪೈಕಿ 41 ಶಾಲೆಗಳನ್ನು 8ನೇ ತರಗತಿಗೆ ಉನ್ನತೀಕರಿಸಲಾಗಿರುತ್ತದೆ.<br>15. ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ 2024-25ನೇ ಸಾಲಿನಲ್ಲಿ ಪ್ರಸ್ತುತ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಹೆಚ್ಚುವರಿಯಾಗಿ 1419 ಆಂಗ್ಲ (ದ್ವಿಭಾಷಾ) ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲಾಗಿರುತ್ತದೆ.<br>16.ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಂದ ಸಾಧನೆ ಮಾಡಿದ ಶಿಕ್ಷಕರುಗಳಿಗೆ ರಾಜ್ಯ ಮಟ್ಟದ ಉತ್ತಮ |

| | | |
|---|---|---|
| | | ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುತ್ತಿದೆ. ಇದರಿಂದಾಗಿ ಶಿಕ್ಷಕರು ತಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪರಿಣಾಮಕಾರಿ ಪಾಠ ಬೋಧನೆಗೆ ಶ್ರಮಿಸುವರು.<br>17. ಪ್ರತಿ ವರ್ಷ ರಾಜ್ಯದಲ್ಲಿ 8 ಉತ್ತಮ ಶಾಲೆಯನ್ನು ಗುರುತಿಸಿ ಸ್ವಾಭಿಮಾನಿ ಶಾಲೆಗಳಾಗಿ ಆಯ್ಕೆ ಮಾಡಿ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.<br>18. ರಾಜ್ಯದ ಎಲ್ಲಾ ಶಾಲೆಗಳಿಗೆ ಸಿ.ಆರ್.ಪಿ., ಬಿ.ಆರ್.ಪಿ.. ಬಿ.ಆರ್.ಸಿ., ಡಯಟ್ ಉಪನ್ಯಾಸಕರು, ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಗಳು ಪ್ರತಿ ಮಾಹೆ ಸದರಿ ಶಾಲೆಗಳಿಗೆ ಭೇಟಿ ನೀಡುವುದರೊಂದಿಗೆ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಅನುಪಾಲನೆ ಮಾಡಲು ಸೂಚಿಸಲಾಗಿರುತ್ತದೆ.<br>19. ಪಿ.ಆರ್.ಡಿ.ಎಫ್ ಯೋಜನೆಯಡಿ ಗ್ರಾಮಸಭೆ ನಡೆಸುವ ಮೂಲಕ ಮಕ್ಕಳ ದಾಖಲಾತಿ ಆಂದೋಲನವನ್ನು ಹಮ್ಮಿಕೊಂಡು ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.<br>20. ಎನ್.ಟಿ.ಎಸ್.ಇ /ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ & ಎಂ.ಹೆಚ್.ಆರ್.ಡಿ ಮೂಲಕ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>21. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಪ್ರತಿ ಬ್ಲಾಕ್‌ನಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ಪೋಷಕರ ಮತ್ತು ಮಕ್ಕಳ ಮನವೊಲಿಸಿ ಶಾಲೆಗೆ ಕರೆತರಲು ಕ್ರಮವಹಿಸಲಾಗುತ್ತಿದೆ. |
| ಇ) | ಕಡಿಮೆ ಸಂಖ್ಯೆಯ ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಿಷಯವಾರು ಗುಣಮಟ್ಟದ ಶಿಕ್ಷಣ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಗುಣಮಟ್ಟದ ಶಿಕ್ಷಣ ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಇಲ್ಲ<br>1. 1 ರಿಂದ 3ನೇ ತರಗತಿಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದ 03 ತಿಂಗಳ ಅವಧಿಯಲ್ಲಿ ವಿದ್ಯಾಪ್ರವೇಶ ಎಂಬ ನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.<br>2. 4ನೇ ತರಗತಿಯಿಂದ 9ನೇ ತರಗತಿಯವರಿಗೆ ಕಲಿಕಾ ದೃಢೀಕರಣಕ್ಕಾಗಿ ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳನ್ನು ಒದಗಿಸಲಾಗಿದೆ.<br>3. ಶಾಲಾ ಉಸ್ತುವಾರಿ ನೋಡಲ್ ಅಧಿಕಾರಿಗಳಿಗೆ ದತ್ತು ಯೋಜನೆಯಲ್ಲಿ ಶಾಲೆಗಳನ್ನು ಹಂಚಿಕೆಮಾಡಿ ಶಾಲಾ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ.<br>4. ಶಾಲೆಗಳಿಗೆ ಅಗತ್ಯವಾದ ಗ್ರಂಥಾಲಯ, ಪ್ರಯೋಗಾಲಯ ಉಪಕರಣಗಳನ್ನು, ಪೀಠೋಪಕರಣಗಳನ್ನು, Science Kit, Maths Kit ನೀಡಲಾಗಿದೆ.<br>5. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಷಯಾಧಾರಿತ ತರಬೇತಿಯನ್ನು ಡಯಟ್ ಮುಖಾಂತರ ಒದಗಿಸಲಾಗುತ್ತಿದೆ.<br>6. ಇಂಗ್ಲೀಷ್ ವಿಷಯದಲ್ಲಿ ಶಿಕ್ಷಕರಿಗೆ ಪರಿಣಾಮಕಾರಿ |

| | | |
|---|---|---|
| | | ಇಂಗ್ಲೀಷ್ ಭಾಷಾ ಬೋಧನೆಗೆ RIE ಬೆಂಗಳೂರು ರವರ ಮೂಲಕ ಶಿಕ್ಷಕರಿಗೆ MTIP, ELDP, PDP, ತರಬೇತಿಗಳನ್ನು ಒದಗಿಸಲಾಗಿದೆ.<br>7. ಪ್ರೌಢಶಾಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಲ್ಲಿ ಕ್ರಿಯಾತ್ಮಕತೆ ಮತ್ತು ಸಂಶೋಧನಾ ಪ್ರವೃತ್ತಿಗೆ ಪೂರಕ ವಾತಾವರಣ ಕಲ್ಪಿಸಲಾಗುತ್ತಿದೆ.<br>8. ಪ್ರೌಢಶಾಲೆಗಳಲ್ಲಿ ಟ್ಯಾಲ್ಪ್ ಯೋಜನೆಯಲ್ಲಿ ಕಂಪ್ಯೂಟರ್ ಲ್ಯಾಬ್ ಮತ್ತು ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸಿದ್ದು ಎಲ್ಲಾ ಶಿಕ್ಷಕರಿಗೆ ಕಂಪ್ಯೂಟರ್ ತರಬೇತಿ ನೀಡಲಾಗಿದೆ.<br>9. ಓದು ಕರ್ನಾಟಕ, ಮರುಸಿಂಚನ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಮೂಲಭೂತ ಕೌಶಲ್ಯಗಳ ಕಲಿಕೆಗೆ ವಿಶೇಷ ಕಾಳಜಿ ವಹಿಸಲಾಗುತ್ತಿದೆ.<br>10. ರಾಜ್ಯಾದ್ಯಂತ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು 43133 ಶಿಕ್ಷಕರ ಹುದ್ದೆಗಳ ಪೈಕಿ 2024-25 ನೇ ಸಾಲಿನಲ್ಲಿ 33863 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ನೇಮಿಸಿಕೊಳ್ಳಲಾಗಿರುತ್ತದೆ ಮತ್ತು ರಾಜ್ಯಾದ್ಯಂತ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 8954 ಹುದ್ದೆಗಳಿಗೂ ಸಹ ತಾತ್ಕಾಲಿಕವಾಗಿ ಅತಿಥಿ ಶಿಕ್ಷರನ್ನು ನೇಮಿಸಿಕೊಳ್ಳುವ ಮೂಲಕ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಮವಹಿಸಲಾಗಿರುತ್ತದೆ.<br>11. ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP) ವನ್ನು ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 2016-17ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮದಡಿ ಶಾಲೆಗಳಿಗೆ ಒದಗಿಸಲಾಗುವ ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು (ಲ್ಯಾಪ್ ಟಾಪ್, ಪ್ರೊಜೆಕ್ಟರ್, ಕಂಪ್ಯೂಟರ್‌ಗಳನ್ನು) ಬಳಸುವ ಕುರಿತು, ಇ-ಸಂಪನ್ಮೂಲಗಳನ್ನು ಬಳಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲು 4687 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು 3463 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರೊಜೆಕ್ಟರ್ ಒದಗಿಸಲಾಗಿದೆ. 2521 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಒದಗಿಸಲಾಗಿದೆ.<br>12. ಶಿಕ್ಷಕರು ಮತ್ತು ವಿದ್ಯಾರ್ಥಿಗಳು Digital Skill ಬಳಕೆಗಾಗಿ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಭಿವೃದ್ಧಿಗೆ ಮೇಲಿನ ಪರಿಕರಗಳನ್ನು ಶಾಲೆಗಳಿಗೆ ಸರಬರಾಜು ಮಾಡುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.<br>13. ಮುಂದುವರೆದು 37000 ಕ್ಕೂ ಅಧಿಕ ಇ-ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ "ದೀಕ್ಷಾ" ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ. ಇವುಗಳಿಗೆ QR ಕೋಡ್‌ಗಳನ್ನು ಲಿಂಕ್ ಮಾಡಲಾಗಿದ್ದು, QR ಕೋಡ್ ಗಳನ್ನು ಪಠ್ಯಪುಸ್ತಕದಲ್ಲಿ ಮುದ್ರಿಸಲಾಗಿದೆ. QR ಕೋಡ್ ಗಳನ್ನು scan ಮಾಡುವ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನಾರ್ಜನೆಗಾಗಿ ಇವುಗಳನ್ನು ಬಳಸಿಕೊಳ್ಳುತ್ತಿದ್ದಾರೆ. |
| ಈ) | ಕಡಿಮೆ ದಾಖಲಾತಿ | |

| | | |
|---|---|---|
| | ಹೊಂದಿರುವ ಶಾಲೆಗಳ ವಿದ್ಯಾರ್ಥಿಗಳನ್ನು ಸಮೀಪದ ಶಾಲೆಗಳಿಗೆ ಸಂಯೋಜನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು; | ಇಲ್ಲ |
| ಉ) | ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಶೂನ್ಯ ದಾಖಲಾತಿ ಇರುವ ಹಾಗೂ ಶೂನ್ಯ ಶಿಕ್ಷಕರಿರುವ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಮಕ್ಕಳ ದಾಖಲಾತಿ ಪ್ರಕ್ರಿಯೆಯು ಸದರಿ ಶೈಕ್ಷಣಿಕ ಸಾಲಿನ ಜುಲೈ 31ರ ವರೆಗೆ ಮುಂದುವರೆಸಲಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ಶಾಲೆಯನ್ನು ಶೂನ್ಯ ದಾಖಲಾತಿ ಶಾಲೆಯೆಂದು ಗುರುತಿಸಲು ಅವಕಾಶವಾಗುವುದಿಲ್ಲ.<br><br>ಮುಂದುವರೆದು, ಶಿಕ್ಷಕರ ಕೊರತೆಯಿರುವ ಶಾಲೆಯಲ್ಲಿ ಪಕ್ಕದ ಶಾಲೆಯ ಶಿಕ್ಷಕರನ್ನು ನಿಯೋಜನೆ ಮುಂದುವರೆಸುತ್ತಿರುವುದರಿಂದ ಹಾಗೂ ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಬೋಧನೆ ನಡೆಸುತ್ತಿರುವುದರಿಂದ ಯಾವುದೇ ಶಾಲೆಯಲ್ಲಿ ಬೋಧನಾ ಚಟುವಟಿಕೆ ಶೂನ್ಯಗೊಂಡಿಲ್ಲ. |
| ಊ) | ರಾಜ್ಯದಾದ್ಯಂತ ಕಳೆದ ನಾಲ್ಕು ವರ್ಷಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿಂದ ಬಾಗಿಲು ಮುಚ್ಚಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯಾದ್ಯಂತ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚಿರುವುದಿಲ್ಲ. ಮಕ್ಕಳ ದಾಖಲಾತಿ ಶೂನ್ಯವಾದಲ್ಲಿ ಮಾತ್ರ ತಾತ್ಕಾಲಿಕವಾಗಿ ಶಾಲೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಭವಿಷ್ಯದಲ್ಲಿ ಒಂದು ವೇಳೆ ಅಲ್ಲಿ ಮಕ್ಕಳು ದಾಖಲಾದಲ್ಲಿ ಪುನಃ ಶಾಲೆಯನ್ನು ಪುನರಾರಂಭಿಸಲಾಗುವುದು. |

**ಇಪಿ 32 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

**Annexure**

| District wise less then 10 , less then 20 and less then 30 enrollment school | | | | | | | |
|---|---|---|---|---|---|---|---|
| Sl no | District name | Primary | | | Secondary | | |
| | | less then or equal to 10 enrollment | greater then 11 and Less then 20 | greater then 21 and Less then 30 | less then or equal to 10 enrollment | greater then 11 and Less then 21 | greater then 21 and Less then 31 |
| 1 | BAGALKOT | 33 | 96 | 143 | 0 | 0 | 0 |
| 2 | BALLARI | 16 | 55 | 35 | 0 | 0 | 1 |
| 3 | BELAGAVI | 94 | 143 | 126 | 0 | 0 | 0 |
| 4 | BELAGAVI CHIKKODI | 91 | 185 | 171 | 0 | 0 | 0 |
| 5 | BENGALURU RURAL | 204 | 274 | 177 | 0 | 0 | 0 |
| 6 | BENGALURU U NORTH | 19 | 56 | 53 | 0 | 0 | 0 |
| 7 | BENGALURU U SOUTH | 39 | 102 | 96 | 0 | 0 | 0 |
| 8 | BIDAR | 80 | 202 | 131 | 0 | 0 | 0 |
| 9 | CHAMARAJANAGARA | 81 | 138 | 95 | 0 | 0 | 0 |
| 10 | CHIKKABALLAPURA | 257 | 444 | 222 | 0 | 0 | 1 |
| 11 | CHIKKAMANGALURU | 237 | 377 | 189 | 0 | 0 | 2 |
| 12 | CHITRADURGA | 136 | 296 | 245 | 0 | 0 | 1 |
| 13 | DAKSHINA KANNADA | 37 | 119 | 95 | 1 | 0 | 2 |
| 14 | DAVANAGERE | 65 | 168 | 150 | 0 | 0 | 0 |
| 15 | DHARWAD | 9 | 42 | 45 | 0 | 0 | 0 |
| 16 | GADAG | 14 | 33 | 26 | 0 | 0 | 0 |
| 17 | HASSAN | 490 | 696 | 347 | 0 | 4 | 8 |
| 18 | HAVERI | 27 | 99 | 118 | 0 | 0 | 0 |
| 19 | KALBURGI | 69 | 175 | 170 | 0 | 0 | 1 |
| 20 | KODAGU | 73 | 85 | 40 | 1 | 1 | 1 |
| 21 | KOLAR | 347 | 532 | 300 | 0 | 0 | 3 |
| 22 | KOPPAL | 14 | 45 | 56 | 0 | 0 | 0 |
| 23 | MANDYA | 296 | 384 | 233 | 0 | 1 | 4 |
| 24 | MYSURU | 176 | 373 | 270 | 0 | 0 | 0 |
| 25 | RAICHUR | 19 | 88 | 104 | 0 | 0 | 0 |
| 26 | RAMANAGARA | 283 | 323 | 174 | 0 | 0 | 3 |
| 27 | SHIVAMOGGA | 222 | 424 | 289 | 0 | 0 | 1 |
| 28 | TUMAKURU | 366 | 612 | 312 | 0 | 2 | 2 |
| 29 | TUMAKURU MADHUGIRI | 163 | 320 | 179 | 0 | 0 | 1 |
| 30 | UDUPI | 43 | 106 | 76 | 0 | 1 | 2 |
| 31 | UTTARA KANNADA | 142 | 223 | 150 | 0 | 1 | 1 |
| 32 | UTTARA KANNADA SIRSI | 164 | 264 | 173 | 0 | 0 | 0 |
| 33 | VIJAYANAGARA | 19 | 78 | 87 | 0 | 0 | 1 |
| 34 | VIJAYAPURA | 64 | 189 | 206 | 0 | 0 | 0 |
| 35 | YADAGIRI | 9 | 64 | 79 | 0 | 0 | 0 |
| | Total | 4398 | 7810 | 5362 | 2 | 10 | 35 |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಶಾಲಾ ಶಿಕ್ಷಣ ಇಲಾಖೆ